

# ಮಾರ್ಜಾಲ ಮಾಯಿ ಮಮತೆಯ ತಾಯಿ

ರಕ್ಷಿತ್ ಶೆಟ್ಟಿ ಅಭಿನಯದ 'ಚಾರ್ಲಿ' ಸಿನಿಮಾ ಚಿತ್ರರಸಿಕರ ಮನಸ್ಸು ಗೆದ್ದಿದೆ. ಅದು ನಾಯಿಯ ಕಥೆಯಾದರೆ, ಇಲ್ಲಿರುವುದು ಬೆಕ್ಕಿನ ಮರಿಗಳ ಕಥೆ. ಚಾರ್ಲಿಯಂತೆ ಇದೂ ಪ್ರಾಣಿಪ್ರಿಯರ ಮನಸ್ಸು ಆರ್ದ್ರಗೊಳಿಸುವ ಅನುಭವ ಕಥನ.

■ ವೃಷಾಂಕ್ ಖಾಡಿಲ್ಕರ್ ಅರಸಿನಮಕ್ಕಿ

ಆಗಾಗ್ಗೆ ಮನೆಯ ಸುತ್ತ ಠಳಾಯಿಸುತ್ತಾ ನಾವು ಇದ್ದಲ್ಲಿಗೇ ಬಂದು ತೀರಾ ಪರಿಚಿತರಂತೆ ನಮ್ಮ ಕಾಲುಗಳಿಗೆ ತನ್ನ ತಲೆ, ಮೈ, ಬಾಲ ತಾಗಿಸಿಕೊಂಡು ಸಲುಗೆ, ಆತ್ಮೀಯತೆಯನ್ನು ಬೆಳೆಸಿಕೊಂಡಿದ್ದ ಆ ಬೆಕ್ಕಿಗೆ ಕುರುಕಲು ತಿಂಡಿಯನ್ನು ಹಾಕುತ್ತಿದ್ದೆ. ಅದರ ಮೇಲಿನ ಪ್ರೀತಿಗಿಂತಲೂ – ಸಿಹಿ ನಿದ್ದೆಯನ್ನು ಹಾಳುಗೆಡಹುವ ಇಲಿಗಳ ಭಯೋತ್ಪಾದಕ ಕೃತ್ಯಗಳನ್ನು ನಿಯಂತ್ರಿಸಬಹುದು ಎನ್ನುವ ಕಾರಣಕ್ಕೆ ಆ ಬೆಕ್ಕಿಗೆ ವಿಶೇಷ ಆದರಾತಿಥ್ಯವನ್ನು ಮನೆಯವರೆಲ್ಲರೂ ನೀಡುತ್ತಿದ್ದೆವು. ಅಟ್ಟದಲ್ಲಿ ಇಲಿಗಳನ್ನು ಹುಡುಕುತ್ತಿತ್ತೋ ಅಥವಾ ಮರಿಗಳನ್ನು ಇಡಲು ಜಾಗ ಹುಡುಕುತ್ತಿತ್ತೋ ಗೊತ್ತಿಲ್ಲ. ಆದರೆ ಒಂದಷ್ಟು ದಿನಗಳ ನಂತರ ಅಟ್ಟದಲ್ಲಿ ಬೆಕ್ಕು ಮೂರು ಮರಿಗಳನ್ನು ಮಾಡಿತ್ತು.

ಬೆಕ್ಕು ಮರಿ ಮಾಡಿದೆ ಎಂದು ಸ್ಪಷ್ಟವಾಗಿ ಗೊತ್ತಾದಾಗ ಕೆಲವು ದಿನಗಳೇ ಉರುಳಿದ್ದವು. ಅದೊಂದು ದಿನ ಇನ್ನೂ ಅರ್ಧಂಬರ್ಧ ಕಣ್ಬಿಟ್ಟಿದ್ದ ಮರಿಗಳು ಏಣಿಯ ಬಳಿಗೆ ಬಂದು ಬೆರಗುಗಣ್ಣುಗಳಿಂದ ಇಣುಕಿ ನಮ್ಮ ಕಣ್ಣು ಕಂಡಾಗ ಹಿಂತಿರುಗಿ ಹೋಗುವುದನ್ನು ನೋಡಿದ ನನಗೆ ಆ ತಾಯಿ ಬೆಕ್ಕಿನ ಬಗ್ಗೆ ಪ್ರೀತಿ ಹೆಚ್ಚಿತು. ನಂತರ ಅದಕ್ಕೆ ನಮ್ಮ ಮನೆಯವರೆಲ್ಲ ಹಾಲು, ಅನ್ನ, ಕುರುಕಲು ತಿಂಡಿಗಳನ್ನೆಲ್ಲ ಧಾರಾಳವಾಗಿ ನೀಡಲಾರಂಭಿಸಿದರು. ಮನುಷ್ಯರಿಗಾದರೆ ಬಾಣಂತನ, ಕಂದಮ್ಮನ ಉಪಚಾರ ಹೇಗಿರುತ್ತೆ? ಈ ಪ್ರಾಣಿಗಳನ್ನೆಲ್ಲ ಪಾಪ ದೇವರೇ ಕಾಪಾಡಬೇಕು ಎಂದು ಅಮ್ಮ ತಾತ್ವಿಕ ವಿಚಾರಗಳನ್ನು ಮುಂದಿಡುತ್ತಿದ್ದಳು! ಅಷ್ಟರಲ್ಲಾಗಲೇ ಬೆಕ್ಕು ಮನೆಯಲ್ಲಿರುವ ಮೂರ್ನಾಲ್ಕು ಅಟ್ಟಕ್ಕೆ ಮರಿಗಳನ್ನು ಶಿಫ್ಟ್ ಮಾಡತೊಡಗಿತ್ತು.

ಒಂದು ದಿನ ಮಧ್ಯಾಹ್ನದ ವೇಳೆಗೆ ಮರಿಗಳನ್ನು ಸಾಗಿಸಿಕೊಂಡು ಬಚ್ಚಲು ಮನೆಯ ಒಲೆಯೊಳಗೇ ತಂದು ಬಿಟ್ಟಿತು. ಆ ಮರಿಗಳಿಗಿನ್ನೂ ನೆಟ್ಟಗೆ ನಿಂತು ನಡೆಯುವಷ್ಟು ಬಲವಿರಲಿಲ್ಲ. ಅಲ್ಲೇ ಕುಸಿದು ಬೀಳುವಂತಿದ್ದವು. ಅದುವರೆಗೂ ಮನೆಯ ವಠಾರದಲ್ಲೆ ತಾನು ಬೇಟೆಯಾಡುತ್ತಾ, ನಮ್ಮ ಮನೆಯೊಳಗೆ 'ಶುದ್ಧ ಸಸ್ಯಾಹಾರಿ' ಊಟ ಮಾಡುತ್ತಿದ್ದ ಬೆಕ್ಕು, ಅಂದು ಸಂಜೆಯ ವೇಳೆಗೆ ಹೊಸ ಆಹಾರ ಹುಡುಕುತ್ತಾ ಹೊರಟಿತೋ ಏನೋ – ದಿಢೀರನೆ ನಾಪತ್ತೆಯಾಯಿತು.